ಒಂದನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಃ ನ್ಯಾಯಾಲಯ, ಮದ್ದೂರು

CC 2013/2023 ಪಿಡಬ್ಲ್ಯೂ-1

ದಿನಾಂಕಃ-17-06-2026 ರಂದು ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಆರೋಪಿಯ ಪರ ಮಾನ್ಯ ಶ್ರೀ. ಎಂಎಂ ವಕೀಲರಿಂದಃ-**

ನಾನು ದ್ವಿತೀಯ ಪಿಯುಸಿವರೆಗೂ ವಿದ್ಯಾಭ್ಯಾಸ ಮಾಡಿರುತ್ತೇನೆ. ನನ್ನ ಪ್ರಮಾಣ ಪತ್ರದಲ್ಲಿನ ವಿಚಾರ ತಿಳಿದುಕೊಂಡಿರುತ್ತೇನೆ. ಆರೋಪಿ ನನಗೆ 2022 ರಿಂದ ಪರಿಚಯವಿರುತ್ತಾರೆ. ಆರೋಪಿ ಕೆಎಸ್ ಆರ್ ಟಿಸಿ ನೌಕರರಾಗಿರುತ್ತಾರೆ. ನಾನು ಜಮೀನು ವ್ಯವಸಾಯ ಮಾಡುತ್ತೇನೆ ಮತ್ತು ಎಳನೀರು ವ್ಯಾಪಾರ ಮಾಡುತ್ತೇನೆ, ಎಳನೀರು ಮಾರಲು ಮಾರುಕಟ್ಟೆಗೆ ಬರುವಾಗ ಆರೋಪಿಯ ಪರಿಚಯವಾಗಿರುತ್ತಾರೆ. ತಿಂಗಳಿಗೆ ನನಗೆ ಎಳನೀರು ವ್ಯಾಪಾರದಿಂದ 30-50 ಸಾವಿರ ಆದಾಯವಿದೆ. ನಾನು ವ್ಯವಸಾಯ ಕೂಡ ಮಾಡುತ್ತೇನೆ. ನನಗೆ 3 ಎಕರೆ ನೀರಾವರಿ ಜಮೀನು ಇದ್ದು, ಕಬ್ಬು, ಭತ್ತ, ರಾಗಿ ಬೆಳೆಯುತ್ತೇನೆ. ನಮ್ಮ ಮನೆಯಲ್ಲಿ ನಾನು, ನನ್ನ ಹೆಂಡತಿ, ಇಬ್ಬರು ಮಕ್ಕಳು ಇದ್ದೇವೆ. ತಿಂಗಳಿಗೆ 5-6 ಸಾವಿರ ಖರ್ಚು ಇದೆ. ದಿ 07-03-2023 ರಲ್ಲಿ ಆರೋಪಿ ನನ್ನನ್ನು ಮದ್ದೂರಿನ ಟಿಬಿ ಸರ್ಕಲ್ ಬಳಿ ಹಣ ಕೇಳಿರುತ್ತಾರೆ. 3 ತಿಂಗಳಲ್ಲಿ ವಾಪಸ್ಸು ಕೊಡುವುದಾಗಿ ಹೇಳಿರುತ್ತಾರೆ. ಆಗ ಆರೋಪಿ ಬಿಟ್ಟು ಬೇರೆ ಯಾರು ಇರಲಿಲ್ಲ. 3-4 ದಿನ ಬಿಟ್ಟು ಹಣ ಕೊಡುವುದಾಗಿ ನಾನು ತಿಳಿಸಿದ್ದೆ. ದಿ 07-03-2023 ರಂದು ನಾನು ಹಣ ಕೊಟ್ಟಿರುತ್ತೇನೆ. ನಾನು ನಗದು ರೂಪದಲ್ಲಿ ಆರೋಪಿಗೆ ಹಣ ಕೊಟ್ಟಿರುತ್ತೇನೆ, ಹಣ ಕೊಟ್ಟಾಗ ನಾನು ಮತ್ತು ಆರೋಪಿ ಮಾತ್ರ ಇದ್ದೇವು. ನಾನು ಆರೋಪಿಗೆ ಮೊದಲು ಹಣ ಕೊಟ್ಟಿರುತ್ತೇನೆ. ನಾನು ಆರೋಪಿಗೆ ಯಾವುದೇ ಹಣವನ್ನು ಮನೆಯಲ್ಲಿ ಕೊಟ್ಟಿಲ್ಲ ಎಂದರೆ ಸರಿಯಲ್ಲ.

**ಈ ಹಂತದಲ್ಲಿ ಆರೋಪಿಯ ಪರ ವಕೀಲರು ಮುಂದುವರೆದ ಪಾಟೀಸವಾಲಿಗೆ ಕಾಲಾವಕಾಶ ಕೋರಿದ್ದು, ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿಯಾಗಿದೆಂದು ಒಪ್ಪಿರುತ್ತಾರೆ.

ಒಂದನೇ ಅಪರ ಸಿವಿಲ್ ಮತ್ತು ಜೆಎಂಎಫ್,ಸಿ,

ನ್ಯಾಯಾಧೀಶರು, ಮದ್ದೂರು.

ಸಾಕ್ಷಿಯ ಸಹಿಃ